| ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ., ದೇವರಾಜ ಅರಸ್ ಮಾರ್ಕೆಟ್, ಹಾಸನ. 264825 | | |
|---|---|---|
| ವಾರ್ಷಿಕ ಬಡ್ಡಿ ದರದ ವಿವರಗಳು | ಸಾಮಾನ್ಯರಿಗೆ % | ಹಿರಿಯ ನಾಗರಿಕರಿಗೆ % |
| * 1 ವರ್ಷದಿಂದ 3 ವರ್ಷಗಳವರೆಗೆ | 10.5 | 11 |
| * 181 ದಿನಗಳಿಂದ 365 ದಿನಗಳವರೆಗೆ | 8 | 8.5 |
| * 91 ದಿನಗಳಿಂದ 180 ದಿನಗಳವರೆಗೆ | 7 | 7.5 |
| * 31 ದಿನಗಳಿಂದ 90 ದಿನಗಳವರೆಗೆ | 6 | 6.5 |
| * 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ | | |
| -ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ | | |



# ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ : ಎಸ್.ಎನ್.ಮಂಜುನಾಥದತ್ತ









## ತಂಡಕ್ಕೆ ಮರಳಿದ ಬೆನ್ನಲ್ಲೇ ಕ್ರಿಕೆಟ್‌ಗೆ ಆಶಿಶ್ ನೆಹ್ರಾ ವಿದಾಯ

ಟೀಂ ಇಂಡಿಯಾದ ಎಡಗೈ ವೇಗಿ ಆಶಿಶ್ ನೆಹ್ರಾ ಇತ್ತೀಚೆಗಷ್ಟೇ ಟೀಂ ಇಂಡಿಯಾ ತಂಡವನ್ನು ಸೇರಿಕೊಂಡಿದ್ದರು. ಆದರೆ ಅಷ್ಟರಲ್ಲೇ ಕ್ರಿಕೆಟ್‌ಗೆ ವಿದಾಯ ಘೋಷಿಸುವ ನಿರ್ಧಾರವನ್ನು ಕೈಗೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಗಾಯದ ಸಮಸ್ಯೆಯಿಂದಾಗಿ ತಂಡದಲ್ಲಿ ದೂರ ಉಳಿದಿದ್ದ ಆಶಿಶ್ ನೆಹ್ರಾ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಗೆ ತಂಡವನ್ನು ಸೇರಿಕೊಂಡಿದ್ದರು. ಸದ್ಯ ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಆಡುತ್ತಿರುವ ನೆಹ್ರಾ ತಮ್ಮ 18 ವರ್ಷಗಳ ಕ್ರಿಕೆಟ್ ವೃತ್ತಿ ಬದುಕಿಗೆ ವಿದಾಯ ಘೋಷಿಸಲಿದ್ದಾರೆ.



## ವಿರೋಧದ ನಡುವೆಯೂ ಪ್ರಕಾಶ್ ರೈಗೆ ಪ್ರಶಸ್ತಿ ಪ್ರದಾನ

ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದ ನಟ ಪ್ರಕಾಶ್ ರೈಗೆ ತೀವ್ರ ವಿರೋಧದ ನಡುವೆಯೂ ಡಾ.ಶಿವರಾಮ ಕಾರಂತ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಬಿಜೆಪಿ ಹಾಗೂ ನಾಥಪಂಥದವರ ತೀವ್ರ ವಿರೋಧದ ನಡುವೆಯೂ ಉಡುಪಿಯಲ್ಲಿ ರೈಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು.



## ಸಿಎಂ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಡಿ ನೋಟಿಫೈ ಬ್ರಹ್ಮಾಸ್ತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಮುಖಂಡ ಬಿ.ಜೆ.ಪುಟ್ಟಸ್ವಾಮಿ ಭೂಹಗರಣದ ಪ್ರಕರಣವನ್ನು ದಾಖಲೆ ಸಮೇತ ಬಿಡುಗಡೆ ಮಾಡಿದ್ದಾರೆ. ಬೆಂಗಳೂರಿನ ಭೂಪಸಂದ್ರದಲ್ಲಿ ಸರ್ವೆ ನಂ.20ರಲ್ಲಿ 6.26 ಎಕರೆಯನ್ನು ವಸತಿ ಪ್ರದೇಶದ ಸೃಷ್ಟಿಗೆ ಯೋಗ್ಯ ಎಂದು 1982ರಲ್ಲಿ ಸೂಚಿಸಲಾಗಿತ್ತು. ಸಿದ್ದರಾಮಯ್ಯ ಅವರು 2016ರ ಜೂನ್‌ನಲ್ಲಿ ಈ ಜಮೀನನ್ನು ಡಿನೋಟಿಫೈ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.


ಜನತಾಮಾಧ್ಯಮ ಬೆಳಗಿನ ದೈನಿಕ | JANATHAMADHYAMA | KARKAN. RNI 41566. | ಸಂಪುಟ : 40 | ಸಂಚಿಕೆ :333 | ಬುಧವಾರ ಅ.11, 2017 | ದೂರವಾಣಿ : 268494 | ಪುಟ-4 | ರೂ.2-00 | NO. HSN-761/ 2015-17


### ▯ ಎತ್ತಿನಹೊಳೆ ಯೋಜನೆ ಮೊದಲ ಹಂತದ ಕಾಮಗಾರಿ

# ಜಮೀನು ಖರೀದಿಯ ದರ ನಿಗದಿ ಅಡೆತಡೆ ಇತ್ಯರ್ಥ

ಹಾಸನ : ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲನೆ ಹಂತದ ಕಾಮಗಾರಿಗೆ ಇರುವ ಜಮೀನಿನ ನೇರ ಖರೀದಿಗೆ ಇದ್ದ ದರ ನಿಗದಿ ಅಡೆತಡೆ ಬಹುತೇಕ ಇತ್ಯರ್ಥವಾಗಲಿದೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಜಿಲ್ಲಾ ಮಟ್ಟದ ದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಏಕರೂಪದ ಜಮೀನಿನ ಜಾಗಕ್ಕೆ ಏಕರೂಪದ ದರ ನಿಗದಿಪಡಿಸಲು ತೀರ್ಮಾನಿಸಲಾಯಿತು.

ಭಾಗಾಯ್ತು ಜಮೀನಿನಲ್ಲಿ ಇರುವ ತೋಟಗಾರಿಕೆ ಬೆಳೆಗಳಿಗೆ ಪ್ರತ್ಯೇಕವಾಗಿ ತೋಟಗಾರಿಕೆ ಇಲಾಖೆಯಿಂದ ಮೌಲ್ಯೀಕರಿಸಿದ ದರದ ಪರಿಹಾರ ವಿತರಿಸಲು ಸಹ ನಿರ್ಧರಿಸಲಾಯಿತು.

ಕಾಫಿ ತೋಟಗಳಿಗೆ ಸಂಬಂಧಿಸಿದಂತೆ ದೊಡ್ಡ ಸಿಲ್ವರ್ ಮರಗಳನ್ನು ಹೊರತು ಪಡಿಸಿ ಕಾಫಿ ಬೆಳೆಯನ್ನು ಒಳಗೊಂಡಂತೆ ಖರೀದಿ ದರ ನಿಗದಿಪಡಿಸಲಾಯಿತು.

ಅಪರ ಜಿಲ್ಲಾಧಿಕಾರಿ ಬಿ.ಆರ್. ಪೂರ್ಣಿಮ, ಹಾಸನ ಕಾಫಿ ಮಂಡಳಿಯ ಜಂಟಿ ನಿರ್ದೇಶಕ ಹೇಮಂತ್ ಕುಮಾರ್, ಹಾಸನ ಕೃಷಿ ಜಂಟಿ ನಿರ್ದೇಶಕ ಟಿ.ರಾಮಚಂದ್ರಯ್ಯ, ಸಕಲೇಶಪುರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಿಂಗರಾಜು, ಸಕಲೇಶಪುರ ಎತ್ತಿನಹೊಳೆ ಯೋಜನೆಯ ಕಾರ್ಯಪಾಲಕ ಅಭಿಯಂತರ ಹರೀಶ್, ಸಕಲೇಶಪುರ ತಹಸೀಲ್ದಾರ್ ನಾಗಭೂಷಣ್ ಹಾಗೂ ಮತ್ತಿತರ ಅಧಿಕಾರಿಗಳು ಹಾಜರಿದ್ದರು.



- ▯ ಡಿ.ಸಿ. ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ದರ ನಿರ್ಧರಣಾ ಸಲಹಾ ಸಮಿತಿ ಸಭೆ
- ▯ ಮೌಲ್ಯೀಕರಿಸಿದ ಪರಿಹಾರ ಧನ ವಿತರಣೆಗೆ ನಿರ್ಧಾರ
- ▯ ಏಕರೂಪ ಜಮೀನಿಗೆ ಏಕರೂಪ ದರ ನೀಡಲು ತೀರ್ಮಾನ
- ▯ ದೊಡ್ಡ ಸಿಲ್ವರ್ ಮರ ಹೊರತು ಪಡಿಸಿ ಕಾಫಿ ಬೆಳೆ ಖರೀದಿ ದರ ನಿಗದಿ

## ಹಣ ನೀಡಲು ಸಭೆ ಸಮ್ಮತಿ

ಎತ್ತಿನಹೊಳೆ ಯೋಜನೆಗೆ 448.33 ಎಕರೆ ಜಮೀನು ಖರೀದಿಸುವ ಅಗತ್ಯವಿದ್ದು, ಇದಕ್ಕಾಗಿ ಒಟ್ಟಾರೆ 147,41,08,743 ರೂ. ಹಣ ನೀಡಲು ನಿರ್ಧರಣಾ ಸಲಹಾ ಸಮಿತಿ ಸಭೆ ಸಮ್ಮತಿ ನೀಡಿತು.

17.33 ಎಕರೆ ಒಣಭೂಮಿಗೆ ಪ್ರತಿ ಎಕರೆಗೆ 22,28,575 ರೂಪಾಯಿಯಂತೆ 3,97,52,206 ರೂಪಾಯಿ, ತರಿ ಭೂಮಿಗೆ 141.14 ಎಕರೆ ಜಮೀನಿಗೆ 24,39,024 ರೂಪಾಯಿಯಂತೆ 34,47,86,530 ರೂಪಾಯಿ, ಕಾಫಿ ತೋಟಕ್ಕೆ ಪ್ರತಿ ಎಕರೆಗೆ 38,46,576 ರೂಪಾಯಿಯಂತೆ 284.14 ಎಕರೆ ಜಮೀನಿಗೆ 109,38,21,976 ರೂಪಾಯಿ, 1.36 ಎಕರೆ ಭಾಗಾಯ್ತು ಜಮೀನಿಗೆ ಪ್ರತಿ ಎಕರೆಗೆ 24,39,024 ರೂಪಾಯಿಯಂತೆ ಒಟ್ಟಾರೆ 46,34,145 ರೂಪಾಯಿ, ಭೂ ಪರಿವರ್ತನೆಯಾಗಿರುವ 3.14 ಎಕರೆ ಜಾಗಕ್ಕೆ ಪ್ರತಿ ಚದರ ಮೀಟರ್‌ಗೆ 2000 ರೂಪಾಯಿಯಂತೆ ಒಟ್ಟಾರೆ 2,71,13,895 ರೂಪಾಯಿ ದರ ನಿಗದಿ ಮಾಡುವುದಾಗಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿ ತಿಳಿಸಿದರು.

## ಎಲ್ಲಾ ರೀತಿಯ ಕಾಫಿ ತೋಟಗಳಿಗೂ ಒಂದೇ ಬೆಲೆ

ವಿಶೇಷ ಭೂ ಸ್ವಾಧೀನ ಅಧಿಕಾರಿ ಜಗದೀಶ್ ಅವರು, ಈವರೆಗೆ ಆಗಿರುವ ಬೆಳವಣಿಗೆಗಳು, ಯೋಜನೆಗೆ ಅಗತ್ಯವಿರುವ ಜಮೀನಿನ ಪ್ರಮಾಣ , ಈ ಹಿಂದೆ ನಿಗದಿಪಡಿಸಿರುವ ದರ ಹಾಗೂ ಅದರ ಬಗ್ಗೆ ರೈತರ ಅಭಿಪ್ರಾಯಗಳನ್ನು ಸಭೆಗೆ ಮಂಡಿಸಿದರು.

ನಂತರ ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ, ಕಾಫಿ ತೋಟವನ್ನು ಅರೇಬಿಕಾ, ರೊಬಸ್ಟಾ ಎಂದು ಪ್ರತ್ಯೇಕಿಸದೆ ಎಲ್ಲಾ ರೀತಿಯ ಕಾಫಿ ತೋಟಗಳಿಗೆ ಒಂದೇ ರೀತಿಯಲ್ಲಿ ಬೆಲೆ ನಿಗದಿಪಡಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಅದರಂತೆ ಎಕರೆಗೆ 38,46,576 ರೂ. ನಿಗದಿಪಡಿಸಲಾಯಿತು.

## ಪ್ರತ್ಯೇಕ ದರ : ಬೆಳೆಗಾರರ ಆಕ್ಷೇಪ

ಈ ಮೊದಲು ಒಟ್ಟಾರೆ 448.33 ಎಕರೆಗೆ ದರ ನಿಗದಿಪಡಿಸುವ ಸಂದರ್ಭ ಏಕ ಸ್ವರೂಪದ ಜಮೀನಿಗೆ ಪ್ರತ್ಯೇಕ ರೀತಿಯಲ್ಲಿ ದರ ನಿಗದಿಪಡಿಸಲಾಗಿದೆ. ಇದನ್ನು ಸರಿಪಡಿಸಬೇಕು ಎಂದು ಬೆಳೆಗಾರರು, ಗ್ರಾಮಸ್ಥರು ಒತ್ತಾಯಿಸಿದರು.

ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಖಾಸಗಿ ಜಮೀನಿನ ನೇರ ಖರೀದಿಗೆ ಜಿಲ್ಲಾ ಮಟ್ಟದ ದರ ನಿರ್ಧರಣಾ ಸಲಹಾ ಸಮಿತಿ ಸಭೆಯನ್ನು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ನಡೆಸಿದರು.

# ಸಂತೇಪೇಟೆ ರಸ್ತೆ : ದುರಸ್ತಿ ಭಾಗ್ಯ ಕಾಣುವುದೇ?

ಹಾಸನ : ನಗರದಲ್ಲಿ ಅ.12ರಿಂದ ಸುಪ್ರಸಿದ್ಧ ಹಾಸನಾಂಬೆ ದರ್ಶನಕ್ಕೆ ಸಿದ್ಧತೆ ಪೂರ್ಣವಾಗಿದೆ. ರಾಜ್ಯಾದ್ಯಂತ ಲಕ್ಷಾಂತರ ಭಕ್ತರನ್ನು ಹೊಂದಿರುವ ಹಾಸನಾಂಬೆ ದರ್ಶನಕ್ಕೆ ವಿವಿಧ ಜಿಲ್ಲೆಗಳು ಹಾಗೂ ಪಟ್ಟಣ-ನಗರಗಳಿಂದ ಭಕ್ತಾದಿಗಳು ಬರುವವರಿದ್ದಾರೆ. ಭಕ್ತರ ದರ್ಶನಕ್ಕೆ ಅಡ್ಡಿಯಾಗದಂತೆ ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ರೂಪಿಸುವುದಾಗಿ ಜಿಲ್ಲಾಡಳಿತ ಸ್ಪಷ್ಟಪಡಿಸಿದೆ.

ಈ ಹಿನ್ನೆಲೆಯಲ್ಲಿ 'ಜನತಾಮಾಧ್ಯಮ' ಪತ್ರಿಕೆಯ ವರದಿಗಾರ ಮಂಗಳವಾರ ಮಧ್ಯಾಹ್ನ ಹಾಸನಾಂಬೆ ದೇವಸ್ಥಾನದ ಸುತ್ತಮುತ್ತ ಹಾಗೂ ಹಿಂದೆ ಮುಂದೆ ಅಡ್ಡಾಡಿದಾಗ ಇನ್ನೂ ದುರಸ್ತಿ ಕಾಣದ ರಸ್ತೆಗಳು, ಗುಂಡಿಗಳಿಂದ ಆವೃತ್ತವಾಗಿರುವ ರಸ್ತೆಗಳ ಮಧ್ಯದಲ್ಲಿ ಇದೀಗ ದುರಸ್ತಿಯಾಗಿರುವಂತೆ ಕಂಡು ಬರುವ ಮ್ಯಾನ್‌ಹೋಲ್‌ಗಳು ಸ್ವಚ್ಛವಾಗದಿರುವುದು ಕಂಡು ಬಂತು. ಚರಂಡಿಗಳ ಮೇಲೆ ಹಾಸಿದ ಕಲ್ಲುಗಳನ್ನು ಕಿತ್ತು ಬಿಸಾಡಿರುವುದರಿಂದ ಚರಂಡಿಯೊಳಗೆ ರಾತ್ರಿ ವೇಳೆ ಯಾರಾದರೂ ಬೀಳುವ ಸಂಭವ ಇದೆ.

ದೇವಸ್ಥಾನದ ಎಡಭಾಗದ ರಸ್ತೆ, ಗಣಪತಿ ದೇವಸ್ಥಾನದ ಮುಂಭಾಗ, ಹಾಸನಾಂಬ ವೃತ್ತ ಹಾಗೂ ದೇವಸ್ಥಾನದ ಹಿಂಭಾಗದ ಹೊಸಲೈನ್ ರಸ್ತೆ ಯಾವುದೇ ದುರಸ್ತಿ ಕಂಡಿಲ್ಲ. ಸಂತೇಪೇಟೆ ಸರ್ಕಲ್‌ವರೆಗೂ ಮುಂದುವರಿದಿರುವ ಹೊಸಲೈನ್ ರಸ್ತೆ ಕಿತ್ತು ಹೋಗಿ ಗುಂಡಿ ಬಿದ್ದಿವೆ. ವಾಹನಗಳನ್ನು ಓಡಿಸುವವರು ಎಚ್ಚರಿಕೆ ವಹಿಸದಿದ್ದರೆ ತೀವ್ರ ತರದ ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ.

ಸಂತೇಪೇಟೆ ಸರ್ಕಲ್‌ನಿಂದ ಗೊರೂರು ಕಡೆಗೆ ಮುಂದುವರಿದಿರುವ ರಸ್ತೆಯಂತೂ ನಾಳೆಯಿಂದ ಕಿಕ್ಕಿರಿದ ಭಕ್ತರ ಜನಸಂದಣಿಯಿಂದ ಸಂಚಾರಕ್ಕೆ ಭಾರೀ ಅಡಚಣೆಯಾಗುವುದಂತೂ ಸತ್ಯ. ರಸ್ತೆಯ ಅರ್ಧ ಭಾಗಕ್ಕೆ ಸ್ಲಾಬ್ ಹಾಕಲಾಗಿದ್ದು , ಇನ್ನುಳಿದ ಅರ್ಧ



ಭಾಗದ ರಸ್ತೆ ಜಲ್ಲಿ ಕಲ್ಲಿನಿಂದ ತುಂಬಿಕೊಂಡಿದೆ. ರೈಲ್ವೆ ಸೇತುವೆಯವರೆಗೂ ಇದೇ ದುಸ್ಥಿತಿ ಮುಂದುವರಿದಿದೆ. ಮುಂದಿನ 12 ದಿನಗಳ ಹಾಸನಾಂಬೆ ದರ್ಶನಕ್ಕೆ ಜನರ ನೂಕು ನುಗ್ಗಲು ಸಂಭವಿಸುವುದು ಗ್ಯಾರೆಂಟಿ.

ಸಂತೇಪೇಟೆ ವಸ್ತು ಪ್ರದರ್ಶನದ ಆವರಣದಿಂದ ಹಾಸನಾಂಬ ವೃತ್ತಕ್ಕೆ ನೇರ ಸಂಪರ್ಕ ಕಲ್ಪಿಸುವ ರಸ್ತೆಯಂತೂ ಗುಂಡಿಗಳಿಂದ ತುಂಬಿ ಹೋಗಿದ್ದು , ಈ ಎಲ್ಲಾ ರಸ್ತೆ ದುರಸ್ತಿ ಕೆಲಸಗಳನ್ನು ಜಿಲ್ಲಾಡಳಿತ ಮತ್ತು ನಗರಸಭೆ ಇರುವ ಕಡಿಮೆ ಕಾಲಾವಕಾಶದಲ್ಲಿ ಕೈಗೆತ್ತಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆ ಎದುರಾಗುತ್ತದೆ.

ದೇವಸ್ಥಾನದ ಸುತ್ತಮುತ್ತಲಿನ ನಿವಾಸಿಗಳು, ಕಳೆದ 2 ದಿನಗಳಿಂದಲೂ ನಗರಸಭೆಯ ಸಿಬ್ಬಂದಿ ಬಂದು ಸ್ವಚ್ಛ ಮಾಡಿಲ್ಲ ಎಂದು ದೂರಿದ್ದಾರೆ. ಕಾಟಾಚಾರಕ್ಕೆ ರಸ್ತೆ ದುರಸ್ತಿ ಮಾಡುವುದರ ಬದಲಾಗಿ ಗುಣಮಟ್ಟ ಕಾಪಾಡಿಕೊಳ್ಳುವ ರಸ್ತೆ ದುರಸ್ತಿಗೆ ನಗರಸಭೆ ಮುಂದಾಗಲಿ. ಭಕ್ತ ಜನರ ಮೂಲಭೂತ ಸೌಲಭ್ಯಕ್ಕೆ ಚ್ಯುತಿ ಬರದಂತೆ ಜಿಲ್ಲಾಡಳಿತ ಕಾರ್ಯೋನ್ಮುಖವಾಗಲಿ ಎಂದರೆ ತಪ್ಪಲ್ಲ. ಅಲ್ಲವೇ?

- ▯ ಅಪಘಾತಕ್ಕೆ ಆಹ್ವಾನ ನೀಡುವ ಗುಂಡಿಗಳು
- ▯ ಹಾಸನಾಂಬೆ ದರ್ಶನದ ಭಕ್ತಾದಿಗಳಿಗೂ ತೊಂದರೆ ಸಾಧ್ಯತೆ
- ▯ ಜಿಲ್ಲಾಡಳಿತ ಯುದ್ಧೋಪಾದಿಯಲ್ಲಿ ಕೆಲಸ ಕೈಗೆತ್ತಿಕೊಳ್ಳಬೇಕು
- ▯ ಕಡಿಮೆ ಇರುವ ಅವಕಾಶದಲ್ಲಿಯೇ ರಸ್ತೆ ದುರಸ್ತಿಗೊಳಿಸಲೇಬೇಕು
- ▯ ಸಂತೇಪೇಟೆ ವಸ್ತು ಪ್ರದರ್ಶನ ಆವರಣದಿಂದ ಹಾಸನಾಂಬ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಮಯ

# ರಾಗಿ ಬೆಳೆಗೆ ಕೀಟ ಬಾಧೆ : ತಕ್ಷಣ ಪರಿಹಾರ ಕೈಗೊಳ್ಳಲು ನಿರ್ದೇಶನ

ಹಾಸನ : ಈ ವರ್ಷ ಮುಂಗಾರು ವಿಳಂಬವಾದರೂ ಉತ್ತಮ ಮಳೆಯಾಗಿದೆ. ಅದರೂ ರಾಗಿ ಬೆಳೆಗೆ ಕೀಟ ಭಾದೆ ಕಾಣಿಸಿಕೊಂಡಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಂಡು ಕೃಷಿಕರು ಅನುಸರಿಸಬೇಕಾದ ನಡೆಗಳ ಬಗ್ಗೆ ಅರಿವು ಮೂಡಿಸಿ ಎಂದು ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಶ್ವೇತಾ ದೇವರಾಜು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯ್ತಿ ಹೊಯ್ಸಳ ಸಭಾಂಗಣದಲ್ಲಿ ಮಂಗಳವಾರ ನಡೆದ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಕುಡಿಯುವ ನೀರು ಪೂರೈಕೆ ಹಾಗೂ ಗಂಗಾ ಕಲ್ಯಾಣ ಯೋಜನೆಗಳ ಅನುಷ್ಠಾನ ವಿಳಂಬವಾಗಬಾರದು. ಮುಂದಿನ ಮಾರ್ಚ್ ವೇಳೆಗೆ ಚುನಾವಣೆಗಳು ಹತ್ತಿರವಾಗುವುದರಿಂದ ಅಧಿಕಾರಿಗಳು ಕರ್ತವ್ಯದ ಕಡೆಗೆ ಗಮನ ಹರಿಸಬೇಕು. ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಾರದು. ಜನಸಾಮಾನ್ಯರಿಗೆ ಸರ್ಕಾರ ನಿಗದಿಪಡಿಸಿರುವ ಸೌಲಭ್ಯಗಳನ್ನು ಸಕಾಲದಲ್ಲಿ ತಲುಪಿಸುವುದು ಅಧಿಕಾರಿಗಳ ಹೊಣೆ

## ಮಾಸಿಕ ಪ್ರಗತಿ ಪರಿಶೀಲನಾ ಸಭೆ



ಎಂದು ಹೇಳಿದರು.

ಸರ್ಕಾರದ ಯೋಜನೆಗಳ ಅನುಷ್ಠಾನ ಚುರುಕುಗೊಳಿಸಿ ಸಾಧ್ಯವಾದಷ್ಟು ಡಿಸೆಂಬರ್ ಅಂತ್ಯದೊಳಗೆ ಗುರಿ ಸಾಧಿಸಲು ಶಕ್ತಿಮೀರಿ ಶ್ರಮಿಸಿ ಎಂದು ಶ್ವೇತಾ ದೇವರಾಜ್ ಸೂಚನೆ ನೀಡಿದರು.

ಈವರೆಗಿನ ಯೋಜನೆಗಳ ಅನುಷ್ಠಾನ ಕುಂಠಿತವಾಗಿದೆ. ಮುಂದಿನ ಮೂರ್‍ನಾಲ್ಕು ತಿಂಗಳಲ್ಲಿ ಎಲ್ಲವೂ ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕು. ಯಾವುದೇ ಹಣ ವ್ಯರ್ಥವಾಗಬಾರದು ಎಂದು ನಿರ್ದೇಶನ ನೀಡಿದರು.

ವಸತಿ ಯೋಜನೆಗಳ ಅನುಷ್ಠಾನ ತ್ವರಿತವಾಗಬೇಕು. ಜಾಗ ಲಭ್ಯವಿರುವೆಡೆಗಳಲ್ಲಿ ಬೇಗನೆ ಮನೆಗಳನ್ನು ನಿರ್ಮಾಣ ಮಾಡಬೇಕು. ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನು ಕೂಡ ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಕೃಷಿ ಹೊಂಡ, ಗ್ರಾಮೀಣ ರಸ್ತೆ, ಕೊಟ್ಟಿಗೆ ನಿರ್ಮಾಣಗಳಂತಹ ಕೆಲಸಗಳು ಕಾಲಮಿತಿಯೊಳಗೆ ಮುಗಿಯಲೇಬೇಕು

> "ಮುಂದಿನ ಮಾರ್ಚ್ ವೇಳೆಗೆ ಚುನಾವಣೆಗಳು ಹತ್ತಿರವಾಗುವುದರಿಂದ ಅಧಿಕಾರಿಗಳು ಕರ್ತವ್ಯದ ಕಡೆಗೆ ಗಮನ ಹರಿಸಬೇಕು. ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಾರದು. ಜನಸಾಮಾನ್ಯರಿಗೆ ಸರ್ಕಾರ ನಿಗದಿಪಡಿಸಿರುವ ಸೌಲಭ್ಯಗಳನ್ನು ಸಕಾಲದಲ್ಲಿ ತಲುಪಿಸುವುದು ಅಧಿಕಾರಿಗಳ ಹೊಣೆ .
>
> -ಶ್ವೇತಾ ದೇವರಾಜ್
> ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ

ಎಂದು ಜಿ.ಪಂ. ಅಧ್ಯಕ್ಷರು ಹೇಳಿದರು.

ಜಿಲ್ಲಾ ಪಂಚಾಯ್ತಿ ವತಿಯಿಂದ ನೀಡಲಾಗಿರುವ ಮೊಬೈಲ್ ಸಿಮ್‌ಗಳನ್ನು ಅಧಿಕಾರಿಗಳು ಕಡ್ಡಾಯವಾಗಿ ಬಳಸಬೇಕು. ಜನಪ್ರತಿನಿಧಿಗಳು ಕರೆಗಳನ್ನು ಸ್ವೀಕರಿಸಬೇಕು. ಸ್ಥಳೀಯರ ಸಮಸ್ಯೆಗಳಿಗೆ ಸ್ಪಂದಿಸಿ ಕಾರ್ಯ ನಿರ್ವಹಿಸಬೇಕು ಎಂದು ಶ್ವೇತಾ ದೇವರಾಜ್, ಸಭೆಗೆ ಗೈರು ಹಾಜರಾಗುವ ಅಧಿಕಾರಿಗಳಿಗೂ ಎಚ್ಚರಿಕೆ ನೀಡಿದರು.

(-4ನೇ ಪುಟಕ್ಕೆ)

# ಮಾನಸಿಕ, ಶಾರೀರಿಕ ಸದೃಢತೆ ಹೊಂದಿದವನೇ ಆರೋಗ್ಯವಂತ

## ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯಲ್ಲಿ ನ್ಯಾ॥ ಕೃಷ್ಣಮೂರ್ತಿ ಬಿ.ಸಂಗಣ್ಣನವರ್

ಹಾಸನ : ಆರೋಗ್ಯ ಎಂದರೆ ಕೇವಲ ದೈಹಿಕವಾದುದಷ್ಟೇ ಅಲ್ಲ. ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಸದೃಢತೆ ಹೊಂದಿದ್ದರೆ ಮಾತ್ರ ಆರೋಗ್ಯವಂತ ಎಂದು ಪರಿಗಣಿಸಬಹುದು. ಯಾರಿಗೂ ಮಾನಸಿಕ ಒತ್ತಡ ತಪ್ಪಿದ್ದಲ್ಲ. ಆದರೆ ಖಿನ್ನತೆ ಹಂತ ತಲುಪಬಾರದು. ಈ ಬಗ್ಗೆ ಎಚ್ಚರ ವಹಿಸಬೇಕು. ಎಲ್ಲಾ ಸವಾಲುಗಳನ್ನು ಧೈರ್ಯವಾಗಿ ಎದುರಿಸಬೇಕು ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಕೃಷ್ಣಮೂರ್ತಿ ಬಿ.ಸಂಗಣ್ಣನವರ್ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಹಿಮ್ಸ್ ಬೋಧಕರ ಸಂಘ, ರೋಟರಿ ಕ್ಲಬ್ ಆಫ್ ಹಾಸನ, ರೋಟರಾಕ್ಟ್ ಕ್ಲಬ್ ಆಫ್ ಹಾಸನ ಇವರ ಸಂಯುಕ್ತಾಶ್ರಯದಲ್ಲಿ ಹಿಮ್ಸ್ ಕಾಲೇಜು ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರೀತಿ ಮತ್ತು ಮನಪೂರ್ವಕವಾಗಿ ಕೆಲಸ ಮಾಡಿದರೆ ಮಾನಸಿಕ ಒತ್ತಡ ಕಡಿಮೆ ಮಾಡಲು ಸಾಧ್ಯವಾಗುತ್ತದೆ ಎಂದರು.



ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಆಚರಿಸಲು ಪ್ರಾರಂಭವಾಗಿ 25 ವರ್ಷಗಳಾಯ್ತು. ಸಮಾಜದಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಅತೀ ಮುಖ್ಯವಾಗಿದೆ ಎಂದು ಹೇಳಿದರು.

**ಬೀದಿ ನಾಟಕಕ್ಕೆ ಚಾಲನೆ :** ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಇ.ಇ.ಜಿ. ಹಾಗೂ ಇ.ಸಿ.ಟಿ. ಮತ್ತು ಬಿ.ಟಿ.ಮಾನವ ಕಲಾ ತಂಡ ಆರೋಗ್ಯ ಭಾಗ್ಯ ಶೀರ್ಷಿಕೆ ಅಡಿಯಲ್ಲಿ ನಡೆಸಿಕೊಟ್ಟ ಬೀದಿ ನಾಟಕಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಕೃಷ್ಣಮೂರ್ತಿ ಬಿ.ಸಂಗಣ್ಣನವರ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಹಿರಿಯ ಸಿವಿಲ್ ಜಡ್ಜ್ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಸುವರ್ಣ ಕೆ.ಮಿರ್ಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಜೀವನ ಸಮಯದ ಹಿಂದೆ ಓಡುತ್ತಿದೆ. ದೈನಂದಿನ ಜೀವನವನ್ನು ಒತ್ತಡದಲ್ಲೇ ಕಳೆಯುತ್ತಿದ್ದೇವೆ. ಕಾರ್ಯಕ್ಷೇತ್ರದಲ್ಲಿ ದೊಡ್ಡವರಿಗೆ ಅಷ್ಟೇ ಅಲ್ಲ ಚಿಕ್ಕ ಮಕ್ಕಳಲ್ಲೂ ಸಹ ಮಾನಸಿಕ ಖಿನ್ನತೆಯನ್ನು ಕಾಣಬಹುದಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳು ಮನೆಗಳಲ್ಲಿ ಕೆಲಸ ಮಾಡುವುದರ ಜೊತೆಗೆ ಉದ್ಯೋಗಿಗಳೂ ಆಗಿದ್ದು , ಕೆಲಸದ ಒತ್ತಡ ಅವರನ್ನು ಮಾನಸಿಕ ಖಿನ್ನತೆಗೆ ಗುರಿಯಾಗುವಂತೆ ಮಾಡುತ್ತದೆ. ಇದರಿಂದ ಗಂಡ, ಹೆಂಡತಿಯರ ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚಾಗುತ್ತಿವೆ. ನ್ಯಾಯಾಲಯದಲ್ಲಿ ವಿಚ್ಛೇದನ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದರು.

(-4ನೇ ಪುಟಕ್ಕೆ)

## ಶಿಷ್ಟಾಚಾರ ಉಲ್ಲಂಘನೆ :ಸಭಾಪತಿಗೆ ದೂರು





ಹಾಸನ: ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಹಾಸನಾಂಬ ದೇವಿಯ ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಕರೆದಿದ್ದ ಸಭೆಯಲ್ಲಿ ತಮ್ಮನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎಂ.ಎ. ಗೋಪಾಲಸ್ವಾಮಿ ಅವರು ಪರಿಷತ್‌ನ ಸಭಾಪತಿಗೆ ದೂರು ಸಲ್ಲಿಸಿದ್ದಾರೆ.

ಸೆಪ್ಟೆಂಬರ್ 27ರಂದು ಹಾಸನಾಂಬ ಜಾತ್ರಾ ಮಹೋತ್ಸವದ ಅಂಗವಾಗಿ ಜಿಲ್ಲಾಧಿಕಾರಿಗಳು ತಮ್ಮ ಅಧ್ಯಕ್ಷತೆಯಲ್ಲಿ ಶಾಸಕರನ್ನೊಳಗೊಂಡ ಸಭೆ ನಡೆಸಿದ್ದಾರೆ. ದೇವಿಯ ಜಾತ್ರಾ ಮಹೋತ್ಸವ ಇಡೀ ಜಿಲ್ಲೆಗೆ ಪ್ರಸಿದ್ಧ ಹಾಗೂ ಪುರಾತನ ಜಾತ್ರೆಯಾಗಿರುತ್ತದೆ ಎಂದು ವಿವರಿಸಿದ್ದಾರೆ.

ಈ ಸಭೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ನನಗೆ ಆಹ್ವಾನ ನೀಡಿಲ್ಲ. ಹಾಗಾಗಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ವಿಧಾನ ಪರಿಷತ್ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಹಾಗಾಗಿ ಮುಂಬರುವ ಅಧಿವೇಶನದ ವೇಳೆ ಪರಿಷತ್‌ನಲ್ಲಿಯೇ ಈ ಕುರಿತು ಪ್ರಸ್ತಾಪಿಸುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ. ಬಹುಶಃ ಜಿಲ್ಲಾಧಿಕಾರಿಗಳಿಗೆ ಅನುಭವದ ಕೊರತೆ ಇದೆ. ಜನಪ್ರತಿನಿಧಿಗಳನ್ನು ಕಡೆಗಣಿಸಬಾರದು ಎಂದೂ ಅವರು ಹೇಳಿದ್ದಾರೆ.

## ಎ.ಟಿ.ರಾಮಸ್ವಾಮಿ ದ್ವೇಷದ ರಾಜಕಾರಣ : ಜಿಲ್ಲಾ ಉಸ್ತುವಾರಿ ಸಚಿವ ಮಂಜು ಆರೋಪ




ಅರಕಲಗೂಡು : ಮೂರು ಬಾರಿ ಶಾಸಕರಾಗಿ ಅಭಿವೃದ್ಧಿ ಮಾಡಲಾಗದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಚುನಾವಣೆ ಸಮಯದಲ್ಲಿ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ಸಚಿವ ಎ.ಮಂಜು ಆರೋಪಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಮಂಗಳವಾರ ದಲಿತ ಸಂಘಟನೆಗಳ ಒಕ್ಕೂಟ ಏರ್ಪಡಿಸಿದ್ದ ಮೂಢನಂಬಿಕೆಗಳು ಮತ್ತು ಶೋಷಣೆ ಕುರಿತ ಚಿಂತನಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಶು ಭಾಗ್ಯ ಯೋಜನೆಯಿಂದ ದಲಿತ ವರ್ಗದವರು ಹಾಗೂ ಬಡವರಿಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ಸುಮಾರು 800 ಮಂದಿಗೆ ಈ ಯೋಜನೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಇದರಲ್ಲಿ ರಾಜಕೀಯ ನಡೆದಿಲ್ಲ, ಹೀಗಿರುವಾಗ ಇವರೆಲ್ಲಾ ದಲ್ಲಾಳಿಗಳೇ ಎಂದು ಪ್ರಶ್ನಿಸಿದರು.

ಉದ್ಯೋಗ ಖಾತ್ರಿ ಯೋಜನೆ ತಾಲ್ಲೂಕಿನಲ್ಲಿ ಹಾಳಾಗಲು ರಾಮಸ್ವಾಮಿ ಕಾರಣ ಎಂಬುದು ಜಗಜ್ಜಾಹೀರಾಗಿದೆ. ಅಧಿಕಾರಿಗಳ ವಿರುದ್ಧ ಮೊಕದ್ದಮೆ ದಾಖಲಿಸಲು ಮಾಜಿ ಶಾಸಕ ಎ.ಟಿ.ರಾಮಸ್ವಾಮಿಯವರೇ ನೇರ ಕಾರಣ. ಇದು ತಾಲ್ಲೂಕಿನ ಜನತೆಗೂ ಗೊತ್ತಿರುವ ಸತ್ಯ ಎಂದು ಕಿಡಿಕಾರಿದರು. (-4ನೇ ಪುಟಕ್ಕೆ)

## ಐ.ಎ.ಎಸ್.ಗೆ ಬಡ್ತಿ : ರಾಜ್ಯ ಶಿಫಾರಸ್ಸು



ಜಾನಕಿ



ಕೆ.ಜ್ಯೋತಿ

ಹಾಸನ : ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಜಾನಕಿ ಹಾಗೂ ಬೆಂಗಳೂರಿನ ಉದ್ಯೋಗ ಮತ್ತು ತರಬೇತಿ ಇಲಾಖೆಯ ನಿರ್ದೇಶಕಿ ಕೆ.ಜ್ಯೋತಿ ಸೇರಿದಂತೆ 33 ಹಿರಿಯ ಕೆ.ಎ.ಎಸ್. ಅಧಿಕಾರಿಗಳಿಗೆ ಐ.ಎ.ಎಸ್.ಗೆ ಮುಂಬಡ್ತಿ ನೀಡಿ ಶಿಫಾರಸ್ಸು ಮಾಡಲಾಗಿದೆ.

ರಾಜ್ಯ ಸರ್ಕಾರ ಯು.ಪಿ.ಎಸ್.ಸಿ.ಗೆ 56 ಹಿರಿಯ ಕೆ.ಎ.ಎಸ್. ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿತ್ತು. ನಂತರ ಈ ಪಟ್ಟಿಯನ್ನು 33ಕ್ಕೆ ಇಳಿಸಿತ್ತು.

ಕೆ.ಎಂ.ಜಾನಕಿ ಅವರು ಅರಕಲಗೂಡು ತಾಲ್ಲೂಕಿನ ಕೊಣನೂರು ಗ್ರಾಮದವರು ಹಾಗೂ ಮರ್ಕುಲಿ ಕೃಷ್ಣಮೂರ್ತಿ ಅವರ ಮಗಳು ಕೆ.ಜ್ಯೋತಿ ಹಾಸನ ಮೂಲದವರು. ಶಿಫಾರಸ್ಸು ಪಟ್ಟಿಯಲ್ಲಿ ಇವರಿಬ್ಬರ ಹೆಸರು ಕೂಡ ಇದೆ.

ಇದಲ್ಲದೆ ಹಾಸನದಲ್ಲಿ ಉಪ ವಿಭಾಗಾಧಿಕಾರಿಯಾಗಿ ಕೆಲಸ ಮಾಡಿದ್ದ ಗೋಪಾಲಕೃಷ್ಣ , ಕರೀಗೌಡ, ಶಿವಶಂಕರಪ್ಪ ಅವರ ಹೆಸರು ಕೂಡ ಯು.ಪಿ.ಎಸ್.ಸಿ.ಗೆ ಶಿಫಾರಸ್ಸು ಆಗಿದೆ.

ಮಂಗಳವಾರ ಜಿ.ಪಂ. ಹೊಯ್ಸಳ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯ ವೇಳೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ. ಜಾನಕಿ ಅವರನ್ನು ಐ.ಎ.ಎಸ್.ಗೆ ಶಿಫಾರಸ್ಸು ಮಾಡಿರುವ ಬಗ್ಗೆ ಸುದ್ದಿ ಹೊರ ಬಿದ್ದಿತು. ನಂತರ ಜಾನಕಿ ಅವರನ್ನು ಅಭಿನಂದಿಸಲಾಯಿತು.

## ಅನುದಾನ ದುರ್ಬಳಕೆ ಶಂಕೆ : ದುರಸ್ತಿ ಕಾಣದ ಶಾಲಾ ಕಟ್ಟಡ



ಹಾಸನ : ಕಳೆದ ಐದಾರು ವರ್ಷಗಳಿಂದ ಸುಣ್ಣ ಬಣ್ಣ ಕಾಣದ ಹಾಗೂ ಯಾವಾಗ ಮುರಿದು ಬೀಳುವುದೋ ಎಂಬ ಭಯಕ್ಕೆ ಕಾರಣವಾಗಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದರ ಕತೆ ಇಲ್ಲಿದೆ.

ತಾಲ್ಲೂಕಿನ ಸಾಲಗಾಮೆ ಹೋಬಳಿಯ ವೀರಾಪುರ ಗ್ರಾಮದಲ್ಲಿರುವ ಈ ಹಿರಿಯ ಪ್ರಾಥಮಿಕ ಶಾಲೆಯ ಶಾಲಾಭಿವೃದ್ಧಿಗಾಗಿ ಸರ್ವಶಿಕ್ಷಣ ಅಭಿಯಾನದಡಿ ಅನುದಾನ ದೊರಕುತ್ತದೆಂಬ ಭರವಸೆಯಿದ್ದರೂ ಹಣ ದಕ್ಕಿಲ್ಲ. 51 ಮಕ್ಕಳ ಸಂಖ್ಯೆ ಹೊಂದಿರುವ ಈ ಶಾಲೆಯಲ್ಲಿ ಮೂವರು ಶಿಕ್ಷಕರಿದ್ದರೂ ಅಭಿವೃದ್ಧಿ ಮಾತ್ರ ಶೂನ್ಯ.

ಹೆಂಚಿನ ಮನೆಯ ಈ ಶಾಲಾ ಕಟ್ಟಡದ ರೀಪುಗಳು, ಭಾರೀ ಮಳೆಯ ಕಾರಣ ನೆನೆದು ಮುರಿದು ಬೀಳುವ ಹಂತಕ್ಕೆ ತಲುಪಿವೆ. ಮೂಲೆ ಭಾಗಗಳಲ್ಲಿ ಹೆಂಚುಗಳು ನುಚ್ಚು ನೂರಾಗಿ ಗೋಡೆಗಳ ಮೇಲೆ ಮಳೆ ನೀರು ಇಳಿದು ಗೋಡೆ ಬೀಳುವ ಸಾಧ್ಯತೆ ಇದೆ . ಇಷ್ಟೆಲ್ಲಾ ಅಡ್ಡಿ ಆತಂಕಗಳಿದ್ದರೂ ಶಾಲಾಭಿವೃದ್ಧಿಗಾಗಿ ಯಾರೊಬ್ಬರೂ ಮುಂದೆ ಬಂದಿಲ್ಲ. (-4ನೇ ಪುಟಕ್ಕೆ)